ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/15/ಎಸಿಎಂ(2)/2018-19

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ:27-08-2019.

-::: ಸುತ್ತೋಲೆ :::-

**ವಿಷಯ:** ನೋಡಲ್ ಕೇಂದ್ರಗಳ ಮುಖಾಂತರ ಸೀಟು ಆಯ್ಕೆ ಮಾಡಿಕೊಂಡ ಅಭ್ಯರ್ಥಿಗಳಿಂದ ವಸೂಲಿ ಮಾಡಲಾದ ಶುಲ್ಕ ಹಾಗೂ ಖಜಾನೆಗೆ ಜಮಾ ಮಾಡಲಾದ ಶುಲ್ಕಗಳ ಮಾಹಿತಿಯನ್ನು ಒದಗಿಸುವ ಬಗ್ಗೆ.

**ಉಲ್ಲೇಖ:** ಈ ಕಛೇರಿ ಸಮಸಂಖ್ಯೆ ಸುತ್ತೋಲೆ ಪತ್ರ ದಿ:14--06-2019

**-0000000-**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ನೋಡಲ್ ಕೇಂದ್ರಗಳ ಮೂಲಕ ಸೀಟು ಆಯ್ಕೆ ಮಾಡಿಕೊಂಡ ಅಭ್ಯರ್ಥಿಗಳಿಂದ ಸಂಗ್ರಹಿಸಿದ ಶುಲ್ಕಗಳ ಅಂಕಿ ಅಂಶಗಳನ್ನು ಜಮಾ ಮಾಡಿದ ಮಾಹಿತಿಯನ್ನು ನಿರ್ದೇಶನಾಲಯಕ್ಕೆ ಸಲ್ಲಿಸಲು ಉಲ್ಲೇಖಿತ ಈ ಕಛೇರಿ ಸುತ್ತೋಲೆಯಲ್ಲಿ ತಿಳಿಸಲಾಗಿತ್ತು. ಅದರಂತೆ, ಸರ್ಕಾರಕ್ಕೆ ಜಮಾ ಮಾಡಿರುವ ಮೊತ್ತ ಹಾಗೂ ಸಂಸ್ಥೆಗಳಿಗೆ ಜಮಾ ಮಾಡಿರುವ ಮೊತ್ತದ ಅಂಕಿ ಅಂಶಗಳ ವಿವರವನ್ನು ನಿರ್ದೇಶನಾಲಕ್ಕೆ ಸಲ್ಲಿಸಲು ಈ ಕೆಳಕಂಡಂತೆ ಕ್ರಮವಹಿಸಲು ಸೂಚಿಸಲಾಗಿದೆ.

**ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ** ಪ್ರವೇಶ ಹೊಂದಿದ ವಿದ್ಯಾರ್ಥಿಗಳಿಂದ ಸಂಗ್ರಹಿಸಿದ ಬೋಧನಾಶುಲ್ಕ, ಪ್ರವೇಶ ಶುಲ್ಕ, ಅಭಿವೃದ್ಧಿ ಶುಲ್ಕಗಳನ್ನು ಸರ್ಕಾರಕ್ಕೆ ಜಮಾ ಮಾಡಿರುವ ಮೊತ್ತವನ್ನು ಸಲ್ಲಿಸುವುದು. ನೋಡಲ್ ಕೇಂದ್ರದ ಪ್ರಾಂಶುಪಾಲರ ಎಸ್.ಬಿ.ಖಾತೆಗೆ ಇತರೆ ಶುಲ್ಕದ ಜಮಾ ಮಾಡಿ

ಶುಲ್ಕ ವಸೂಲಿ ಮಾಡಿದ ದಿನಾಂಕದ ಮರು ದಿನವೇ **0202-02-101-0-04** ಲೆಕ್ಕ ಶೀರ್ಷಿಕೆಗೆ ಜಮಾ ಮಾಡುವುದು. ಇತರೆ ಶುಲ್ಕವನ್ನು ನೋಡಲ್ ಕೇಂದ್ರದ ಪ್ರಾಂಶುಪಾಲರ ಎಸ್.ಬಿ.ಖಾತೆಗೆ ಜಮಾ ಮಾಡಿಕೊಂಡು, ಅಂತಿಮವಾಗಿ ಪ್ರವೇಶ ಮುಗಿದ 03 ದಿನಗಳ ಒಳಗೆ ಆಯಾ ಪಾಲಿಟೆಕ್ನಿಕ್‌ನ ಪ್ರಾಂಶುಪಾಲರಿಗೆ ಡಿ.ಡಿ ಅಥವಾ ಚೆಕ್ ಮೂಲಕ ನೀಡತಕ್ಕದ್ದು.

**ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ** ಪ್ರವೇಶ ಹೊಂದಿದ ವಿದ್ಯಾರ್ಥಿಗಳಿಂದ ಸಂಗ್ರಹಿಸಿದ ಬೋಧನಾ ಶುಲ್ಕ, ಅಭಿವೃದ್ಧಿ ಶುಲ್ಕ ಮತ್ತು ಪ್ರವೇಶ ಶುಲ್ಕದ ಶೇ.50 ರಷ್ಟನ್ನು ಶುಲ್ಕ ವಸೂಲಿ ಮಾಡಿದ ದಿನಾಂಕದ ಮರುದಿನವೇ **0202-02-101-0-06** ಲೆಕ್ಕ ಶೀರ್ಷಿಕೆಗೆ **ಜಮೆ ಮಾಡುವುದು**. ಉಳಿದ ಬೋಧನಾ ಶುಲ್ಕ, ಅಭಿವೃದ್ಧಿ ಶುಲ್ಕ, ಪ್ರವೇಶ ಶುಲ್ಕದ ಶೇ. 50 ರಷ್ಟು ಮತ್ತು ಇತರೆ ಶುಲ್ಕವನ್ನು ಅಂತಿಮವಾಗಿ ಪ್ರವೇಶ ಮುಗಿದ 03 ದಿನಗಳ ಒಳಗೆ ಸಂಬಂಧಿಸಿದ ಅನುದಾನಿತ ಪಾಲಿಟೆಕ್ನಿಕ್‌ನ ಪ್ರಾಂಶುಪಾಲರಿಗೆ ಡಿ.ಡಿ ಅಥವಾ ಚೆಕ್ ಮೂಲಕ ನೀಡತಕ್ಕದ್ದು.

ಸರ್ಕಾರಿ ಪಾಲಿಟೆಕ್ನಿಕ್ ಹಾಗೂ ಅನುದಾನಿತ ಪಾಲಿಟೆಕ್ನಿಕ್‌ಗಳ ನೋಡಲ್ ಕೇಂದ್ರಗಳ ಮುಖಾಂತರ ಸರ್ಕಾರಿ ಹಾಗೂ ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ಪ್ರವೇಶ ಹೊಂದಿದ ವಿದ್ಯಾರ್ಥಿಗಳಿಂದ ಸಂಗ್ರಹಿಸಿದ ಬೋಧನಾ ಶುಲ್ಕ, ಪ್ರವೇಶ ಶುಲ್ಕ, ಅಭಿವೃದ್ಧಿ ಶುಲ್ಕ ಮತ್ತು ಇತರೆ ಶುಲ್ಕವನ್ನು ಸಮೀಪದ ಸರ್ಕಾರಿ ಪಾಲಿಟೆಕ್ನಿಕ್‌ಗೆ ಸರ್ಕಾರಕ್ಕೆ ಜಮಾ ಮಾಡಿರುವ ಮೊತ್ತ ಹಾಗೂ ಸಂಸ್ಥೆಗಳಿಗೆ ಜಮಾ ಮಾಡಿರುವ ಮೊತ್ತದ ಅಂಕಿ-ಅಂಶಗಳ ವಿವರವನ್ನು ನಿರ್ದೇಶನಾಲಯಕ್ಕೆ ಸಲ್ಲಿಸಲು ಈ ಮೂಲಕ ಸೂಚಿಸಲಾಗಿದೆ.

ನಿರ್ದೇಶಕರು

29/08/19

ಇವರಿಗೆ,

*ಎಲ್ಲಾ 24 ನೋಡಲ್ ಕೇಂದ್ರಗಳ ಪ್ರಾಂಶುಪಾಲರಿಗೆ – ಸೂಕ್ತ ಮಾಹಿತಿಗಾಗಿ ಹಾಗೂ ಅನುಸರಣೆಗಾಗಿ.*

<u>ಪ್ರತಿ ಮಾಹಿತಿಗಾಗಿ:-</u>

1. ಜಂಟಿ ನಿರ್ದೇಶಕರು(ಆಡಳಿತ), ತಾಂ.ಶಿ.ನಿ, ಬೆಂಗಳೂರು.
2. ನಿರ್ದೇಶಕರ ಆಪ್ತಶಾಖೆಗೆ
3. ಲೆಕ್ಕ ವಿಭಾಗಕ್ಕೆ
4. ಕಡತಕ್ಕೆ.